# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3900 /2023

**ಚಾಸಾ ಃ- 02 / ಪ್ರಾಸಾ ಃ- 02**

| | |
|---|---|
| ಹೆಸರು | ಗೌರಮ್ಮ |
| ಗಂಡನ ಹೆಸರು | ಗಂಗಯ್ಯ |
| ವಯಸ್ಸು | 33 |
| ಉದ್ಯೋಗ | ಕೂಲಿ ಕೆಲಸ |
| ವಿಳಾಸ | ಉಡುವೆಗೆರೆ |

**ದಿನಾಂಕಃ 24.10.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-1 ನನ್ನ ಅತ್ತೆ, ಚಾಸಾ-3 ಮತ್ತು 4 ರವರು ನನ್ನ ಮ್ಮಕ್ಕಳು. ಚಾಸಾ-5 ಮತ್ತು 6 ರವರ ಪರಿಚಯ ಇರುತ್ತದೆ. ಆರೋಪಿಯು ನನ್ನ ಭಾವ. ಈಗ್ಯೆ ದಿನಾಂಕ 06.06.2023 ರಂದು ಬೆಳಿಗ್ಗೆ 10.00 – 10.30 ಗಂಟೆ ಸಮಯದಲ್ಲಿ ಚಾಸಾ-1 ಮತ್ತು ಚಾಸಾ-3 ಹಾಗೂ 4ರವರು ಆಡನ್ನು ಹೊಡೆದುಕೊಂಡು ಹೊಲದ ಹತ್ತಿರ ಹೋಗಿರುತ್ತಾರೆ. ಸದರಿ ಚಾಸಾ-1,3 ಮತ್ತು 4 ರವರ ಹೋದ ನಂತರ ನಾನು ಹಸುಗಳನ್ನು ಹೊಡೆದುಕೊಂಡು ಹೋಗಿರುತ್ತೇನೆ. ನಾನು ಹೋದಾಗ ಅಷ್ಟೊತ್ತಿಗೆ ಗಲಾಟೆ ಆಗುತ್ತಿತ್ತು. ಚಾಸಾ-3 ಮತ್ತು 4 ರವರು ಏನೆ ನಮ್ಮ ಅಜ್ಜಿಗೆ ಹೊಡೆಯುತ್ತಿದ್ದೀಯಾಎಂದು ಕೇಳುತ್ತಿದ್ದರು. ಆಗ ಆರೋಪಿಯು ಅವರಿಗೂ ಕಲ್ಲು ತೆಗೆದುಕೊಂಡು ಹೊಡೆಯಲು ಓಡಿಸಿಕೊಂಡು ಹೋಗಿರುತ್ತಾರೆ ಹಾಗೂ ಬಾಯಿಗೆ ಬಂದಹಾಗೆ ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾರೆ. ಆಗ ನಾನು ಆರೋಪಿಗೆ ಚಾಸಾ-1 ರವರಿಗೆ ಏಕೆ ಹಲ್ಲೆ ಮಾಡುತ್ತಿದ್ದಿಯಾ ನಾವು ಹಸುವನ್ನು ಮೇಯಿಸುತ್ತಿದ್ಮೇವೆ ಎಂದು ಹೇಳಿದ್ದಕ್ಕೆ ಆರೋಪಿಯು ನಿಮ್ಮದು ಏನೂ ಇರುವುದಿಲ್ಲ ನೀನು ಏಕೆ ಹಸುವನ್ನು ತಂದಿದ್ದೀಯಾ ತೆಗೆದುಕೊಂಡು ಆಚೆ ಹೋಗು ಎಂದು ಫಲ ಕೊಡುವ ಹಸುವಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. ಆಗ ಚಾಸ-1 ರವರು ನಮಗೆ ಭಾಗ ಕೊಟ್ಟಿದ್ದರೆ

ನಾವು ಏಕೆ ಬರುತ್ತಿದ್ದೆವು ಎಂದು ಹೇಳಿರುತ್ತಾರೆ. ಆಗ ಆರೋಪಿಯು ಚಾಸಾ- 1 ರವರಿಗೆ ನಿನ್ನದು ಯಾವುದೂ ಇಲ್ಲ ಎಲ್ಲಾ ಎತ್ತಿಕೊಂಡು ಹೋಗು ಎಂದು ಹೇಳಿದ್ದರು. ಆರೋಪಿಯು ಚಾಸಾ-1ರವರ ತಲೆಗೆ ಮತ್ತು ಮೈಗೆ ದೊಣ್ಣೆಯಿಂದ ಸಿಕಾಕಪಟ್ಟೆ ಹಲ್ಲೆ ಮಾಡಿರುತ್ತಾರೆ. ಆಗ ಬಿಡಿಸಲುಹೋದ ನನಗೂ ಆರೋಪಿಯು ದೊಣ್ಣೆಯಿಂದ ನನ್ನ ತಲೆಗೂ , ಮೈಕೈಗೆ ಹಲ್ಲೆ ಮಾಡಿರುತ್ತಾರೆ. ಚಾಸಾ-1 ರವರು ಏಕೆ ಹಲ್ಲೆ ಮಾಡುತ್ತೀಯಾಎಂದು ಕೇಳಿದಾಗ ಆರೋಪಿಯು ನೀನು ಸತ್ತು ಹೋದರೆ ನಮಗೆ ನೆಮ್ಮದಿ ಎಂದು ಹೇಳಿದ್ದರುಎಂದು ನುಡಿಯುತ್ತಾರೆ. ಚಾಸಾ- 3 ಮತ್ತು 4 ರವರು ನನ್ನ ತಾತಯಿಯವರಿಗೆ ಹಲ್ಲೆ ಮಾಡಬೇಡಿ ಎಂದು ಜೋರಾಗಿ ಕಿರುಚಿರುತ್ತಾರೆ. ಆಗ ರೋಡಿನಲ್ಲಿ ಇದ್ದವರು ಬಂದಾಗ ಆರೋಪಿಯು ದೊಣ್ಣೆಯನ್ನು ಎಸೆದು ಓಡಿಹೋಗಿರುತ್ತಾರೆ. ಆಗ ಯಾರೋ ನನ್ನನ್ನು ಚಾಸ-1 ಮತ್ತು 3 ಮತ್ತು 4 ರವರನ್ನು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ದಿನಾಂಕ 06.06.2023 ರಂದು ಗಲಾಟೆ ಆಗಿದ್ದು ದಿನಾಂಕ 09.06.2023 ರಂದು ಮಹಜರನ್ನು ಜರುಗಿಸಿರುತ್ತಾರೆ, ಮಹರಜು ಸಮಯದಲ್ಲಿ ನಾನು, ಚಾಸಾ-5 ಮತ್ತು ಚಾಸಾ-8 ರವರು ಇದ್ದೆವು ಎಂದುರನುಡಿಯುತ್ತಾರೆ. ಮಹಜರನ್ನು ಸರ್ವೆ ನಂ.129 ರ ಜಮೀನಿನಲ್ಲಿ ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ಜರುಗಿಸಿರುತ್ತಾರೆ. ಮಹಜರ್ ಸಮಯದಲ್ಲಿ ದೊಣ್ಣೆಯನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ.

ಈಗ ಸಾಕ್ಷಿಗೆ ದೊಣ್ಣೆಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ಮುದ್ದೆಮಾಲು 1 ಎಂದು ಗುರುತಿಸಲಾಗಿರುತ್ತದೆ. ಈಗ ಸಾಕ್ಷಿಗೆ ಕೃತ್ಯ ಸ್ಥಳದ ಮಹಜರನ್ನು ತೋರಿಸಲಾಗಿ ಅದರಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಗಲಾಟೆ ಸಂಬಂಧ ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ವಾಟೀ ಸವಾಲು** ಃ- **ಶ್ರೀ. ಎಂ ವಿ ಎಸ್.** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ದಿನಾಂಕ 06.06.2023 ರಂದು ಗಲಾಟೆ ಆಗಿರುತ್ತದೆ ಎಂದು ಹೇಳಿದ್ದು ಇದೇ ಮೊದಲು ನೀವು ಹೇಳುತ್ತಿದ್ದು ಇದಕ್ಕೂ ಮೊದಲು ಎಲ್ಲಿಯೂ ಹೇಳಿರುವುದಿಲ್ಲ

ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಎಷ್ಟು ವರ್ಷದಿಂದ ಉರಿಮಿಷನ್ ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ 5-6 ವರ್ಷಗಳಿಂದ ಎಂದು ನುಡಿಯುತ್ತಾರೆ. ಉರಿಮಿಷನ್ ಕೆಲಸಕ್ಕೆ ಎಷ್ಟು ಗಂಟೆಗೆ ಹೋಗಿ ಎಷ್ಟು ಗಂಟೆಗೆ ವಾಪಸ್ಸು ಬರುತ್ತೀರ ಎಂದರೆ ಸಾಕ್ಷಿಯು ಬೆಳಿಗ್ಗೆ 9.00 ಗಂಟೆಗೆ ಹೋಗಿ 6.00 ಗಂಟೆಗೆ ವಾಪಸ್ಸು ಬಂದಿರುತ್ತೇವೆ ಎದು ನುಡಿಯುತ್ತಾರೆ. ನೀವು ಚಾಸಾ5 ಮತುತ 6 ರವರು ಉರಿಮಿಷನ್ ನಲ್ಲೆ ಕೆಲಸ ಮಾಡುವುದು ಎಂದರೆ ಸಾಕ್ಷಿಯು ಹೌದು ಎಂದು ನುಡಿಯತ್ತಾರೆ. ಗಲಾಟೆ ಆಯಿತು ಎಂದು ಹೇಳಿದ್ದು ಸುಮಾರು ಎಷ್ಟು ಜನರು ಇದ್ದರು ಎಂದರೆ ಸಾಕ್ಷಿ ಸುಮಾರು 20 -30 ಜನರು ಇದ್ದರು ಎಂದು ನುಡಿಯುತ್ತಾರೆ. ನಿಮ್ಮ ಅತ್ತೆಯವರಿಗೆ ಪ್ರಜ್ಞೆ ಹೋಗಿತ್ತ ಎಂದರೆ ಸಾಕ್ಷಿ ಇಲ್ಲ ಚೆನ್ನಾಗಿ ಇದದರು ಎಂದು ನುಡಿಯುತ್ತಾರೆ. ನಿಮ್ಮ ಮಕ್ಕಳಿಗೆ ಆರೋಪಿಯು ಕಲ್ಲನ್ನು ತೆಗೆದುಕೊಂಡು ಹಲ್ಲೆ ಮಾಡಿರುತ್ತಾರೆ ಎಂದು ಎಲ್ಲಾದರೂ ಹೇಳಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಇಲ್ಲೇ ಮೊದಲು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಅದೇ ರೀತಿ ಹಸುವಿಗೂ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಇದೇ ಮೊದಲು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಸರ್ವೆ ನಂ.129 ರ ಜಮೀನು ನಿಮ್ಮದು ಎಂದು ಎಲ್ಲಿಯಾದರೂ ಹೇಳಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಬಟ್ಟೆಗಳು ರಕ್ತದ ಕಲೆಗಳು ಆಗಿತ್ತ ಎಂದರೆ ಸಾಕ್ಷಿ ಹೌದು ಎಂದು ನುಡಿಯತ್ತಾರೆ. ಸದರಿ ರಕ್ತದದ ಬಗ್ಟೆಗಳನ್ನು ಪೋಲಿಸರಿಗೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಡಾಕ್ಟರ್ ರವರು ಡಸ್ಟ್ ಬಿನ್ ಗೆ ಹಾಕಿರುತ್ತಾರೆ ಎಂದು ನುಡಿಯತ್ತೂರೆ. ಪೋಲಿಸರು ಸದರಿ ಬಟ್ಟೆ ಗಳನ್ನು ತೆಗೆದುಕೊಂಡು ಹೋಗಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ಯಡಿನುತ್ತಾರೆ. ನಿಮ್ಮ ಹಾಗು ಆರೋಪಿ ನಡುವೆ ಜಮೀನಿನ ವಿಷಯವಾಗಿ ಕೇಸು ನಡೆಯುತ್ತಿದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಹಾಗುಗ ನಿಮ್ಮ ಅತ್ತೆ ಆಸ್ಪತ್ರೆಗೆ ಬೇರೆ ಬೇರೆ ಅಟೋದಲ್ಲಿ ಹೋಗಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ ಯಾರು ಕರೆದುಕೊಂಡು ಹೋಗಿದ್ದು ಎಂದರೆ ಸಾಕ್ಷಿ ಅವರು ಯಾರು ಎಂದು ಗೊತ್ತಿರುವುದಿಲ್ಲ ಎಂದು ನುಡಿಯತ್ತಾರೆ. ಆಸ್ಪತ್ರೆಯಲ್ಲಿ ಎಷ್ಟು ದಿನ ಇದ್ದಿದ್ದಿರಿ ಎಂದರೆ ಸಾಕ್ಷಿ ಒಂದು ತಿಂಗಳು ಎಂದು ನುಡಿಯತ್ತಾರೆ. ಜಮೀನಿನ ವಿಷಯವಾಗಿ ನಿಮ್ಮ ಮತ್ತು ಆರೋಪಿ ನಡುವೆ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ಥ,ರಹದ ದೊಣ್ಣೆ ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ

ಸಾಕ್ಷಿಯು ಸಿಗುತ್ತದೆ ಆದರೆ ಇದೇ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪೋಲಿಸರು ಏನು ಬರೆದುಕೊಂಡಿರುತ್ತಾರೆ ಎಂದು ನೀವು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಸ್ಥಳಕ್ಕೆ ಬಂದಿದ್ದಿರಲಿಲ್ಲ ಹಾಗೂ ಮಹಜರನ್ನು ಜರುಗಿಸಿರುವುದಿಲ್ಲ ಎಂದರೆ ಸಾಕ್ಷಿ ಸವಳ್ಳು ಎಂದು ನುಡಿಯೂತ್ತಾರೆ. ನೀವು ಹೇಳಿರುವಂತೆ ಯಾವುದೇ ಗಲಾಟೆ ನಡೆದಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮಗೂ ಮತ್ತು ಆರೋಪಿಗೂ ಆಗದೆ ಇರುವುದರಿಂದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ. ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**

## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3900 /2023

**ಚಾಸಾ ಃ- 01 / ಪ್ರಾಸಾ ಃ- 01**

| | |
|---|---|
| ಹೆಸರು | ಕೆಂಪಮ್ಮ |
| ಗಂಡನ ಹೆಸರು | ಚಿಕ್ಕಬಸವಯ್ಯ |
| ವಯಸ್ಸು | 70 |
| ಉದ್ಯೋಗ | ಕೂಲಿ ಕೆಲಸ |
| ವಿಳಾಸ | ಉಡುವೆಗೆರೆ |

**ದಿನಾಂಕಃ 24.10.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-2 ನನ್ನ ಸೊಸೆ, ಚಾಸಾ-3 ಮತ್ತು 4 ರವರು ನನ್ನ ಮೊಮ್ಮಕ್ಕಳು. ಆರೋಪಿಯು ನನ್ನ ಯಜಮಾನರ ಮೊದಲನೆ ಹೆಂಡತಿಯ ಮಗ. ಈಗ್ಗೆ 1 ವರ್ಷದ ಹಿಂದೆ ನಾನು 11.00 – 12.00 ಗಂಟೆ ಸಮಾರಿಗೆ ಹೊಲದ ಹತ್ತಿರ ಆಡನ್ನು ಮೇಹಿಸುತ್ತಾ ನಾನು ಮತ್ತು ನನ್ನ ಮೊಮ್ಮಕ್ಕಳು ಕೂತಿದ್ದೆವು. ಆಗ ಆರೋಪಿಯು ಬಂದು ಸದರಿ ಆಡುಗುಳು ಯಾರವು ಆಚೆ ಹೊಡೆಯಿರಿ ಎಂದು ಹೇಳಿದನು. ಆಗ ನಾನು ಆರೋಪಿಗೆ ಫಲ ಆಗಿರುವ ಹಸುವನ್ನು ಹೊಡೆಯಬೇಡ ಎಂದು ಹೇಳಿದೆನು. ಆಗ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾರೆ. ಆಗ ನಾನು ನಮ್ಮ ಭಾಗ ನಮಗೆ ಕೊಟ್ಟರೆ ಏಕೆ ಬರುತ್ತೇವೆ ಎಂದು ಹೇಳಿದನೆನು. ಆಗಆರೋಪಿಯು ನಿನಗೆ ಏನು ಕೊಡಬೇಕಾಗಿರುವುದು ಎಂದು ಹೇಳಿದನು, ನಾನು ಆಗೆ ಮಾತನಾಡಬೇಡ ಎಂದು ಹೇಳಿದೆನು, ಆಗ ಆರೋಪಿಯು ನನಗೆ ಸಿಕ್ಕಾಪಟ್ಟೆ ಹಲ್ಲೆ ಮಾಡಿದ್ದು ದೊಣ್ಣೆಯಿಂದ ತಲೆಗೆ ಮತ್ತು ಬೆನ್ನಿಗೆ ಹಲ್ಲೆ ಮಾಡಿರುತ್ತಾನೆ. ಆರೋಪಿಯು ಹಲ್ಲೆ ಮಾಡಿದ್ದರಿಂದ ನಾನು ಮೂರ್ಛೆ ಹೋದೆನು.ಆಗ ಚಾಸಾ-2 ರವರು ಬಿಡಿಸಲು ಬಂದಿರುತ್ತಾರೆ. ಆಗ ಆರೋಪಿಯು ಚಾಸಾ- 2ರವರಿಗೂ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. ಆರೋಪಿಯು ಮುಂಡೆ ನೀನು ಸಾಯಿ ಎಂದು ಹಲ್ಲೆ ಮಾಡುತ್ತಿದ್ದನು, ನಾನು ಮೂರ್ಛೆ

ಹೋಗಿದ್ದರಿಂದ ನನ್ನನ್ನು ಮಾಗಡಿಯ ಸರ್ಕಾರಿ ಆಸ್ಪತ್ರೆಗೆ ತಂದು ಸೇರಿಸಿದ್ದರು. ಆಸ್ಪತ್ರೆಯಲ್ಲಿ ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಈಗ ಸಾಕ್ಷಿಗೆ ಹೇಳಿಕೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿದ್ದರಿಂದ ದೂರನ್ನು ನಿಪಿ-1 ಎಂದು ಹಾಗೂ ಹೆಬ್ಬೆಟ್ಟಿನ ಗುರುತನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ದೊಣ್ಣೆಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 1 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಃ- ಶ್ರೀ. ಎಂ ವಿ ಎಸ್.** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಹೇಳಿಕೆಯಲ್ಲಿ ನನ್ನ ಬಾಬ್ತು ಸರ್ವೆ ನಂಬರ್ 129 ಎಂದು ಹೇಳಿಕೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಆರೋಪಿಯು ನಿಮಗೆ ಹಲ್ಲೆ ಮಾಡಿರುತ್ತಾರೆ ಮತ್ತು ನೀವು ಮೂರ್ಛೆ ಬಿದ್ದಿರುತ್ತೀರಿ ಎಂದು ಹೇಳಿ ಬರೆಸಿರುತ್ತೀರಾ ಎಂದರೆ ಸಾಕ್ಷಿ ಬರೆಸಿರಬಹುದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಎಷ್ಟು ಹೊತ್ತಿಗೆ ನಿಮಗೆ ಪ್ರಜ್ಞೆ ಬಂದಿರುತ್ತದೆ ಎಂದರೆ ಸಾಕ್ಷಿಯು ಆಸ್ಪತ್ರೆಗೆ ಬಂದ ಮೇಲೆ ಎಂದು ನುಡಿಯುತ್ತಾರೆ. ನೀವು ಮೂರ್ಛೆ ಹೋದ ನಂತರ ನಿಮಗೆ ಆಸ್ಪತ್ರೆಯಲ್ಲೆ ಪ್ರಜ್ಞೆ ಬಂದಿದ್ದು ಆ ಸಮಯದಲ್ಲಿ ಏನು ಆಗಿರುತ್ತದೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಮೊಮ್ಮಕ್ಕಳು ಸಾರ್ವಜನಿಕರ ಸಹಾಯದಿಂದ ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದು ಹೇಳಿ ಬರೆಸಿರುತ್ತೀರಾ ಎಂದರೆ ಸಾಕ್ಷಿಯು ನನ್ನ ಮೊಮ್ಮಕ್ಕಳೆ ಆಸ್ಪತ್ರೆಗೆ ಸೇರಿಸಿದ್ದು ಆದರೆ ಏನು ಬರೆಸಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಗಲಾಟೆ ಆಯಿತು ಎಂದು ಹೇಳಿದ್ದು ಆಗ ನಿಮ್ಮ ಗಳನ್ನು ಹೊರತು ಪಡಿಸಿ ಬೇರೆ ಯಾರೂ ಇದ್ದಿರಲಿಲ್ಲವಾ ಎಂದರೆ ಸಾಕ್ಷಿ ಯಾರೂ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ನೀವು ಅಸ್ಪತ್ರೆಗೆ ಹೋದ ಎಷ್ಟು ಗಂಟೆಗೆ ನಿಮಗೆ ಪ್ರಜ್ಞೆ ಬಂದಿರುತ್ತದೆ ಎಂದರೆ ಸಾಕ್ಷಿ ಮಾರನೆ ದಿನ ಎಂದು ನುಡಿಯುತ್ತಾರೆ. ನೀವು ನಿಮ್ಮ ಮಗನಿಗೆ ಪೋನ್ ಏನಾದರೂ ಮಾಡಿಸಿದ್ದಿರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮನ್ನು ಆಸ್ಪತ್ರೆಗೆ ಯಾರು ಕರೆದುಕೊಂಡು ಹೋದರು ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು

ನುಡಿಯುತ್ತಾರೆ. ನಿಮ್ಮ ತಲೆಗೆ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿದ್ದು ನಿಮ್ಮ ಬಟ್ಟೆಗಳು ರಕ್ತದ ಕಲೆ ಆಗಿದ್ದವ ಎಂದರೆ ಸಾಕ್ಷಿ ಆಗಿತುತ ಆದರೆ ಡಾಕ್ಟರ್ ರವರು ಬಟ್ಟೆಗಳನ್ನು ಡಸ್ಟ್ಬಿನ್ ಗೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.ಗೌರಮ್ಮ ರವರಿಗೆ ಹಲ್ಲೆ ಮಾಡಿರುವುದನ್ನು ನೀವೇನೂ ನೋಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಮ್ಮ ಬೆನ್ನು ಮತ್ತು ತಲೆಗೆ ಮಾತ್ರ ಏಟಾಗಿತ್ತ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಯಾವ ದಿನಾಂಕದಂದು ಪೋಲಿಸರು ಬಂದು ಹೇಳಿಕೆಯನ್ನು ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಮಾರನೆ ದಿನ ಎಂದು ನುಡಿಯುತ್ತಾರೆ. ಆಸ್ಪತ್ರೆಯಲ್ಲಿ ಎಷ್ಟು ದಿನ ಇದ್ದಿದ್ದಿರಿ ಎಂದರೆ ಸಾಕ್ಷಿ 2 ವಾರ ಎಂದು ನುಡಿಯುತ್ತಾರೆ. ನಿಮ್ಮ ಸೊಸೆ ಗೌರಮ್ಮ ರವರು ಎಷ್ಟು ದಿನ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದರು ಎಂದರೆ ಸಾಕ್ಷಿ ಅವರು 12 ದಿನ ಇದ್ದರು ಎಂದು ನುಡಿಯುತ್ತಾರೆ. ಆಸ್ತಿಯ ವಿಷಯವಾಗಿ ಇದೇ ನ್ಯಾಯಾಲಯದಲ್ಲಿ ಕೇಸು ನಡೆಯುತ್ತಿದ್ದು ಇನ್ನೂ ಮೂಕ್ತಯವಾಗಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾವೆ ಬಾಕಿ ಇರುವುದರಿಂದ ನಿಮ್ಮ ಹಾಗೂ ಆರೋಪಿ ನಡುವೆ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮುದ್ದೆಮಾಲು 1ಧರಹದ ದೊಣ್ಣೆ ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕ್ಷಿ ಏನೋ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಮುದ್ದೆಮಾಲು 1 ಅನ್ನು ಪೋಲಿಸರಿಗೆ ಯಾರು ಕೊಟ್ಟಿದ್ದು ಎಂದರೆ ಸಾಕ್ಷಿ ಅಲ್ಲೇ ಬಿದ್ದಿತ್ತು ಪೊಲಿಸರು ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮುದ್ದೆಮಾಲು 1 ಅನ್ನು ಪೋಲಿಸರು ತೆಗೆದುಕೊಂಡಾಗ ನಿಮ್ಮ ಹೆಬ್ಬೆಟ್ಟಿನ ಗುರುತನ್ನು ಪಡೆದಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮಗೂ ಮತ್ತು ಆರೋಪಿಗೂ ಆಗದೆ ಇರುವ ಕಾರಣ ನೀವು , ನಿಮ್ಮ ಸೊಸೆ ಮತ್ತು ನಿಮ್ಮ ಮೊಮ್ಮಕ್ಕಳು ಸೇರಿ ಆರೋಪಿ ವಿರುದ್ದ ಒಂದು ಸುಳ್ಳು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿುತ್ತಾರೆ. ನೀವು ಹೇಪಳಿರುವಂತೆ ಯಾವುದೇ ಗಲಾಟೆ ನಡೆದಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.